should be promoted to the higher grades ?

Sri Kadidal MANJAPPA.—It is a matter of opinion.

Agricultural Indebtedness.

Q.—239. **Sri V. MASIAPPA** (Hiriyur).—

Will the Government be pleased to state :—

(*a*) whether there has been a survey of the Agricultural indebtedness in the State ;

(*b*) whether any steps have been taken to mitigate this indebtedness of the agriculturists ?

A.—**Sri Kadidal MANJAPPA** (Minister for Revenue and Public Works).—(*a*) Yes.

(*b*) The following enactments were passed :—

(1) Money Lenders' Act of 1939.
(2) Agriculturists' Relief Act of 1928.
(3) Debt Conciliation Board Act of 1937 and 1942.

Land Mortgage Banks, Cheap Credit Co-operative Societies, Multi-purpose Co-operative Societies have been established in the State.

ಶ್ರೀ ವಿ. ಮಸಿಯಪ್ಪನವರು.—(ಎ) ಭಾಗಕ್ಕೆ ಪ್ರಾದು ಎಂಬುದಾಗಿ ಜವಾಬು ಕೊಡೋಣಾಗಿದೆ. ಸಾಲದ ಮೊತ್ತ ಎಷ್ಟೆಂಬುದನ್ನು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಕಡಿದಾಳ್ ಮಂಜಪ್ಪನವರು.—23 ಅಥವಾ 24 ಕೋಟಿ ರೂಪಾಯಿ.

ಶ್ರೀ ವಿ. ಮಸಿಯಪ್ಪನವರು.—ಅದರಲ್ಲೂ ಸೆಕ್ಯೂರ್ಡ್ ಎಷ್ಟು; ಅನ್‌ಸೆಕ್ಯೂರ್ಡ್ ಎಷ್ಟು ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ವಿ. ಮಸಿಯಪ್ಪನವರು.—ಡೆಟ್ ಕಕ್ಸಿಲಿಯೇಷನ್ ಬೋರ್ಡ್ ಎಂಬುದನ್ನು ರಚಿಸಿ ಈ ಸಾಲದ ಪರಿಹಾರ ಮಾಡುತ್ತೀವೆ ಎಂದು ಹೇಳಿದ್ದೀರಿ. ಯಾವಾವ ತಾಲ್ಲೂಕುಗಳಲ್ಲಿ ಡೆಟ್‌ಕ್ಲಿಸಿಲಿಯೇಷನ್ ಬೋರ್ಡ್ ಇದೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ವಿ. ಮಸಿಯಪ್ಪನವರು.—ಡೆಟ್‌ಕ್ಲಿಸಿಲಿಯೇಷನ್ ಬೋರ್ಡ್‌ನವರು ಕೊಡತಕ್ಕ ತೀರ್ಮಾನ ಎರಡು ಪಾರ್ಟಿಗಳಿಗೂ, ಎಂದರೆ ಸಾಲಗಾರರಿಗೆ ಮತ್ತು ಸಾಹುಕಾರರಿಗೆ ಇಬ್ಬರಿಗೂ, ತೊಂದರೆ ಎಂಬುದು ಗೊತ್ತೆ ?

Sri Kadidal MANJAPPA.—There are some inherent defects too in the enactment. We are considering the question of amending the Act.

ಶ್ರೀ ವಿ. ಮಸಿಯಪ್ಪನವರು.—ಈ ಬೋರ್ಡುಗಳನ್ನು ರದ್ದು ಮಾಡಬೇಕೆಂಬ ವಿಷಯ ಸರ್ಕಾರದವರ ಆಲೋಚನೆಯಲ್ಲಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ವಿ. ಮಸಿಯಪ್ಪನವರು.—ಮಲ್ಟಿಪರ್‌ಪಸ್ ಕೋ ಆಪರೇಟೀವ್ ಸೊಸೈಟಿಗಳ ಮೂಲಕ ರೈತರಿಗೆ ಪರಿಹಾರ ಒದಗಿಸುತ್ತಾ ಇದ್ದೀವೆ ಎಂದು ಹೇಳಿದ್ದೀರಿ. ಯಾವ ಯಾವ ಸೊಸೈಟಿಗಳಲ್ಲಿ ರೈತರ ಸಾಲ ಪರಿಹಾರಕ್ಕೆ ಹಣ ಒದಗಿಸಲಾಗಿದೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಸಾಲ ಪರಿಹಾರಕ್ಕೆ ಅಲ್ಲ. ಬೇರೆ ಕಡೆ ಸಾಲ ತೆಗೆಯುವುದಕ್ಕೆ ಬದಲಾಗಿ ಮಲ್ಟಿಪರ್‌ಪಸ್ ಕೋ ಆಪರೇಟೀವ್ ಸೊಸೈಟಿಯಲ್ಲಿ ಕೆಲವು ಕಡೆ ಸಾಲ ಪಡೆಯಬಹುದು.

ಶ್ರೀ ವಿ. ಮಸಿಯಪ್ಪನವರು.—ಈ ಮಲ್ಟಿಪರ್‌ಪಸ್ ಕೋ ಆಪರೇಟೀವ್ ಸೊಸೈಟಿ ಮೂಲಕ ರೈತರ ಸಾಲ ಪರಿಹಾರಮಾಡುವುದಕ್ಕೆ ಸರ್ಕಾರದವರು ಸಹಕಾರ ನೀಡಿ ಹಣ ಒದಗಿಸುವುದಕ್ಕೆ ಪ್ರಯತ್ನಮಾಡಬೇಕೆಂದು ಸರ್ಕಾರದವರಿಗೆ ಶಿಫಾರಸು ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಗೊತ್ತಿಲ್ಲ.

ಶ್ರೀ ವಿ. ಮಸಿಯಪ್ಪನವರು.—ನಂಜನಗೂಡಿನಲ್ಲಿ ನಡೆದ ಕೋ ಆಪರೇಟೀವ್ ಸೆಮಿನಾರ್‌ನಲ್ಲಿ ಈ ರೀತಿ ಶಿಫಾರಸು ಮಾಡಿರಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಮಾಡಿರಬಹುದು.

Sri H. S. RUDRAPPA (Honnali).—May I know the total amount of money advanced by these agencies to the raiyats during the last four or five years ?

Sri Kadidal MANJAPPA.—Notice.

Sri H. S. RUDRAPPA.—Have the Government an idea that these agencies would be able to solve this problem effectively ?

Sri Kadidal MANJAPPA.—Not very effectively ; they are doing their best.

Sri H. S. RUDRAPPA.—May I know the policy and programme of Government to solve this problem ?

Sri Kadidal MANJAPPA.—They are considering the question afresh.

Sri H. S. RUDRAPPA.—What is the opinion of the Government whether the present law is sufficient to deal with this problem ?

Sri Kadidal MANJAPPA.—I told the member that the question is under consideration.

Sri H. S. RUDRAPPA.—Do the Government contemplate any other legislation to deal with this problem ?

Sri Kadidal MANJAPPA.—Same answer—considering.

Sri S. SRINIVASA IYENGAR (T-Narsipur).—Have the Land Mortgage Banks been able to solve this problem?

Sri Kadidal MANJAPPA.—To some extent.

Sri S. SRINIVASA IYENGAR.—To what extent?

Sri Kadidal MANJAPPA.—Notice.

Sri S. SRINIVASA IYENGAR.—Do not the Government feel that there is necessity to give some aid to them?

Sri Kadidal MANJAPPA.—We are giving certain aid.

Sri S. SRINIVASA IYENGAR.—Is it not utterly inadequate?

Sri Kadidal MANJAPPA.—I do not think so.

Sri R. ANANTHARAMAN (Chamarajpet).—In view of the financial stringency, would it not be better if the debt of the agriculturists is written off?

Sri Kadidal MANJAPPA.—Loan given by Government, you mean?

Sri R. ANANTHARAMAN.—Given by both Government and money lenders (Laughter).

Sri Kadidal MANJAPPA.—It is a suggestion.

ಶ್ರೀ ಡಿ. ಆರ್. ಕರೀಗೌಡರು (ಹಾಸನ).—ರಿಸರ್ವ್ ಬ್ಯಾಂಕಿನವರು ರೈತರ ಸಾಲ ತೀರಿಸಬೇಕೆಂದೇನಾದರೂ ಸರ್ವೆ ನಡೆಸುತ್ತಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ನನಗೆ ಗೊತ್ತಿಲ್ಲ.

ಶ್ರೀ ಡಿ. ಆರ್. ಕರೀಗೌಡರು.—ಹಾಸನ ಡಿಸ್ಟ್ರಿಕ್ಟ್ ನಲ್ಲಿ ಕೆಲವು ಹಳ್ಳಿಗಳಲ್ಲಿ ಈಗೆ ಸರ್ವೆ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಇರಬಹುದು.

ಶ್ರೀ ಡಿ. ಆರ್. ಕರೀಗೌಡರು.—ರಿಸರ್ವ್ ಬ್ಯಾಂಕಿನವರು ಬಹಳ ಕಡಮೆ ದರದಲ್ಲಿ ರೈತರಿಗೆ ಸಾಲ ಕೊಡುವಂತೆ ಮಾಡಿ ಅವರ ಸಾಲ ತೀರ್ಪೆಮಾಡಬೇಕೆಂದು ಯೋಚನೆಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಹಾಗೆ ಕೊಟ್ಟರೆ ಬಹಳ ಸಂತೋಷ; ಸಂತೋಷದಿಂದ ಸ್ವೀಕರಿಸುತ್ತೇವೆ.

ಶ್ರೀ ಡಿ. ಆರ್. ಕರೀಗೌಡರು.—ಆ ರೀತಿ ಸಹಾಯ ಹೊಂದುವುದಕ್ಕೆ ಸರ್ಕಾರದವರು ಪ್ರಯತ್ನಮಾಡುತ್ತಾರೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಆಗಬಹುದು; ಮಾಡುತ್ತೇವೆ.

ಶ್ರೀ ಟಿ. ಹನುಮಯ್ಯನವರು (ಹಿರಿಯೂರು-ಎಸ್ಸು ಸೂಚಿತ ಜಾತಿಗಳು).—ವ್ಯವಸಾಯಗಾರರ ಋಣ ಪರಿಹಾರಕ್ಕಾಗಿ ನ್ಯಾಷನಲ್ ಅಗ್ರಿಕಲ್ಚರಲ್ ಬ್ಯಾಂಕನ್ನೇ ನಾದರೂ ಸ್ಥಾಪನೆ ಮಾಡುವುದನ್ನು ಯೋಚನೆಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದು ಕೇಂದ್ರ ಸರ್ಕಾರದವರು ಯೋಚನೆಮಾಡಬೇಕಾದ ವಿಷಯ.

ಶ್ರೀ ಟಿ. ಹನುಮಯ್ಯನವರು.—ಮೈಸೂರು ಸರ್ಕಾರದವರಿಗೇನಾದರೂ ಅದರ ಯೋಚನೆಯಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಇನ್ನೂ ಯೋಚನೆ ಮಾಡಿಲ್ಲ.

ಶ್ರೀ ಟಿ. ಹನುಮಯ್ಯನವರು.—ಯಾವಾಗ ಯೋಚನೆ ಮಾಡುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದನ್ನು ಹೇಳುವುದಕ್ಕಾಗುವುದಿಲ್ಲ. ಯೋಚನೆಮಾಡುತ್ತೇವೆ.

ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).—ದಿವಾನ್ ಶೇಷಾದ್ರಿ ಅಯ್ಯರ್ ಕಾಲದಲ್ಲಿ ಒಂದು ಅಗ್ರಿಕಲ್ಚರಲ್ ಬ್ಯಾಂಕು ಸ್ಥಾಪನೆಯಾಯಿತಲ್ಲಾ ಆಗ ಬ್ಯಾಂಕಿನಿಂದ ದುಡ್ಡು ಪಡೆದವರಲ್ಲಿ ಎಷ್ಟು ಜನ ಸರ್ಕಾರಕ್ಕೆ ಹಣ ವಾಪಸುಕೊಟ್ಟರು?

(No answer)

ಶ್ರೀ ಎಸ್. ಎಂ. ಮರಿಯಪ್ಪನವರು (ಹಿರಿಯೂರು).—ಈಗ ಮಲ್ಟಿಪರ್ಪಸ್ ಕೋ ಆಪರೇಟಿವ್ ಸೊಸೈಟಿಗಳನ್ನು ಏರ್ಪಾಡ ಮಾಡಿದ್ದೀರಲ್ಲಾ ಅವುಗಳಲ್ಲಿ ಸರ್ಕಾರದವರ ಫಂಡೇನಾದರೂ ಇದೆಯೇ!

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ಎಸ್. ಎಂ. ಮರಿಯಪ್ಪನವರು.—ಹಾಗಾದರೆ ಆ ಸೊಸೈಟಿಗಳವರು ರೈತರಿಗೆ ಸಾಲ ತೀರಿಸುವುದಕ್ಕೆ ಹಣ ಕೊಡುವುದಾದರೂ ಹೇಗೆ ಸಾಧ್ಯ!

ಶ್ರೀ ಕಡಿದಾಳ್ ಮಂಜಪ್ಪನವರು.—ರೈತರುಗಳು ಬೇರೆ ಕಡೆಯಲ್ಲಿ ಸಾಲ ತೆಗೆಯುವ ಬದಲು ಈ ಮಲ್ಟಿಪರ್ಪಸ್ ಸೊಸೈಟಿಗಳಿಂದ ತಮ್ಮಲ್ಲಿರುವ ಸಾಮಾನಿನ ಮೇರೆ ಸಾಲ ಪಡೆಯಬಹುದು.

ಶ್ರೀ ಎಸ್. ಎಂ. ಮರಿಯಪ್ಪನವರು.—ಮಲ್ಟಿಪರ್ಪಸ್ ಸೊಸೈಟಿಗಳಿಂದ ಸಾಲ ತೆಗೆದುಕೊಳ್ಳುವುದಕ್ಕೆ ಅವಕಾಶಮಾಡಿದೆಯೆಂದು ಹೇಳಿದ್ದೀರಿ. ಅವರಲ್ಲಿ ಫಂಡೇ ಇಲ್ಲದೆ ಹೇಗೆ ಕೊಡುತ್ತಾರೆ!

ಅಧ್ಯಕ್ಷರು.—ಕೆಲವು ಸೊಸೈಟಿಗಳಲ್ಲಿ ಕೊಡುತ್ತಾರೆಂದು ಉತ್ತರ ಹೇಳಿದ್ದಾರೆ.

ಶ್ರೀ ಎಸ್. ಎಂ. ಮರಿಯಪ್ಪನವರು.—ಹಾಗಾದರೆ funds ಅವುಗಳಿಗೆ ಒದಗಿಸುತ್ತೀರಾ!

ಶ್ರೀ ಕಡಿದಾಳ್ ಮಂಜಪ್ಪನವರು.—ಯೋಚನೆಮಾಡುತ್ತೇವೆ.

ಶ್ರೀ ಬಿ. ಮಾಧವಾಚಾರ್ಯರು (ಭದ್ರಾವತಿ).—ಸರ್ಕಾರದವರು ಕೈಕೊಂಡ ಸರ್ವೆಯಿಂದ, ಸರ್ಕಾರದವರಿಗೆ ಏನು ತಿಳಿಯಬಂತು?

ಶ್ರೀ ಕಡಿದಾಳ್ ಮಂಜಪ್ಪನವರು.—ರೈತರ ಋಣ ಪರಿಹಾರ ಇನ್ನೂ ಆಗಿಲ್ಲ ಎಂದು.

ಶ್ರೀ ಬಿ. ಮಾಧವಾಚಾರ್ಯರು.—ರೈತರ ಋಣವನ್ನು ಪರಿಹಾರಮಾಡಬೇಕೆಂಬ ಆವಶ್ಯಕತೆಯನ್ನು ಮನಗಂಡು ಸರ್ಕಾರದವರು ಆ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮವನ್ನು ಕೈಕೊಳ್ಳುವುದನ್ನು ಯೋಚನೆಮಾಡುತ್ತಾರೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಯೋಚನೆಮಾಡುತ್ತೇವೆ.

Sri K. S. VASAN (Kolar Gold Fields).—Is it not a fact that there is large scale corruption in the administration of these societies and banks?

Mr. SPEAKER.—That does not arise.

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ಒಂದು ಕಾನೂನಿನಿಂದ ಈ ಸಾಲಗಳನ್ನು ಪರಿಹರಿಸುವುದಕ್ಕಾಗುವುದಿಲ್ಲವೇ?

Sri Kadidal MANJAPPA.—It is a matter of opinion.

ಶ್ರೀ ಡಿ. ದೇವರಾಜ ಅರಸ್‌ನವರು (ಹುಣಸೂರು).—ರೈತರ ಸಾಲ ಬಗೆಹರಿಸುವುದಕ್ಕೆ ಮತ್ತು ರೈತನಿಗೆ ಸುಲಭವಾಗಿ ಸಾಲ ಸಿಕ್ಕುವಂತೆ ಮಾಡುವುದಕ್ಕಾಗಿ ಅಗ್ರಿಕಲ್ಚರರ್ ಕ್ರೆಡಿಟ್ ಕಾರ್ಪೊರೇಷನ್ ಸ್ಥಾಪನೆಮಾಡುವುದನ್ನು ಯೋಚನೆಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಯೋಚನೆಮಾಡುತ್ತೇವೆ.

Delay in the disposal of Darkhasts of Depressed Class People.

Q.—243. **Sri G. PUTTASWAMY** (Chikmagalur-Mudigere—Scheduled Castes).—

Will the Government be pleased to state:—

(*a*) whether it has come to their notice that there is delay in the disposal of darkhasts of depressed class people;

(*b*) the action they have taken to arrange for immediate disposal of pending darkhasts?

A.—**Sri Kadidal MANJAPPA** (Minister for Revenue and Public Works)—

(*a*) There are delays generally in all classes of darkhasts.

(*b*) Frequent inspections by higher officers—checking of pending papers—scrutiny of disposals—formulation of programmes, instructions at periodical meetings are some of the methods adopted. Disciplinary action is taken in some cases.

ಶ್ರೀ ಜಿ. ಪುಟ್ಟಸ್ವಾಮಿಯವರು—ಈ ದರಖಾಸ್ತುಗಳನ್ನು ಇಷ್ಟೇ ಕಾಲದಲ್ಲಿ ವಿಲೇವಾರಮಾಡಬೇಕೆಂದು ಕಾಲವೇನಾದರೂ ನಿಗದಿಮಾಡಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದಷ್ಟು ಜಾಗ್ರತೆ ವಿಲೇವಾರಿ ಮಾಡಬೇಕೆಂದು ರೂಲ್ಸ್‌ನಲ್ಲಿದೆ.

ಶ್ರೀ ಜಿ. ಪುಟ್ಟಸ್ವಾಮಿಯವರು—ಪರಮಾವಧಿ ಇಷ್ಟೇ ಕಾಲದಲ್ಲಿ ದರಖಾಸ್ತುಗಳು ವಿಲೆಯಾಗಬೇಕೆಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಇದೆ. ಆದರೆ ಕೆಲವು ಸಂದರ್ಭಗಳಲ್ಲಿ ನಿಗದಿಯಾದ ಅವಧಿಯಲ್ಲಿ ವಿಲೇವಾರಿಮಾಡುವುದಕ್ಕಾಗುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಯವರು.—ಅದಕ್ಕೇನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಉತ್ತರದಲ್ಲೇ ಹೇಳಿದೆ.

ಶ್ರೀ ಜಿ. ಪುಟ್ಟಸ್ವಾಮಿಯವರು.—ಎಷ್ಟು ಕಾಲದಲ್ಲಿ ಮಾಡಬೇಕೆಂದು ಹೇಳಿದೆ?

ಅಧ್ಯಕ್ಷರು.—ಇಷ್ಟೇಕಾಲ ಎಂದು ಹೇಳುವುದು ಕಷ್ಟವೆಂದು ತಿಳಿಸಿದ್ದಾರೆ.

ಶ್ರೀ ವಿ. ಮಸಿಯಪ್ಪನವರು (ಹರಿಯೂರು).—ಹೀಗೆ ಸಾವಕಾಶ ಆಗುವ ಸಂದರ್ಭಗಳು ಯಾವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಉತ್ತರದಲ್ಲೇ ಹೇಳಿದೆ.

ಶ್ರೀ ವಿ. ಮಸಿಯಪ್ಪನವರು.—ಮೇಲ್ಪಟ್ಟ ಅಧಿಕಾರಿಗಳು ಇನ್‌ಸ್ಪೆಕ್ಷನ್‌ಗೆ ಹೋಗುವ ಕಾಲದಲ್ಲಿ ಆಫೀಸಿನಲ್ಲಿ ಪೆಂಡಿಂಗ್‌ನಲ್ಲಿರತಕ್ಕ ದರಖಾಸ್ತುಗಳನ್ನು ಯಾವುದಾದರೂ ಕೆಳಗಿನ ಅಧಿಕಾರಿಗಳಿಗೆ ಕಳುಹಿಸಿಕೊಟ್ಟು ಬಿಟ್ಟು ನಡ್ಯಕ್ಕೆ ತಮ್ಮಲ್ಲಿ ಏನೂ ಪೆಂಡಿಂಗ್‌ನಲ್ಲಿಲ್ಲವೆಂದು ತೋರಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಅಂಥ ಸಂದರ್ಭಗಳು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ವಿ. ಆರ್. ನಾಯ್ಡುರವರು (ಮಲ್ಲೇಶ್ವರಂ).—ಇಂಥ ದರಖಾಸ್ತು ಅರ್ಜಿಗಳು ಎಷ್ಟು ಹರಿಜನರಿಂದ ಬಂದಿವೆ.

Sri Kadidal MANJAPPA.—Does not arise.

Lakkavalli Project.

Q.—310. **Sri H. S. RUDRAPPA** (Honnali).—

Will the Government be pleased to state:—

(*a*) the original and revised estimates of Lakkavalli Project;

(*b*) the extent of the land that will be irrigated by this project;

(*c*) the revised estimate of the left bank channel and when it is likely to be completed;

(*d*) the opinion of the Technical Committee on irrigational projects regarding the construction of this project?

A.—**Sri Kadidal MANJAPPA** (Minister for Revenue and Public Works).—

Rs. in lakhs.

(*a*) 1. Original estimate for the project ... 888·48

Probable cost on revision ... 20

2. Revised estimate for the first stage of the project to construct Dam up to+35 level ... 252·00

(*b*) 180,000 acres.

(*c*) No revised estimate has yet been prepared.